ನಗರ ಡಿವೀಜನ್.

ನಗರ ಡಿವೀಜನ್ ಡಿ॥ ಜಡ್ಜ್‌ರವರ ಕೋರ್ಟಿನಲ್ಲಿ.

1885ನೇ ಇಸವಿ ಅರ್ಜೀ ನಂಬರ್ 34.

ಮೃತಪಟ್ಟ ನಾಗಲಾಪುರದ ಖಾನುಭೋಗ ಸುಬ್ಬಣ್ಣನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಖಾನುಭೋಗ ಸುಬ್ಬಣ್ಣ ಮೃತಪಟ್ಟ ಸದರೀ ನಾಗಲಾಪುರದ ಖಾನುಭೋಗ ಸುಬ್ಬಣ್ಣನಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಕೊಪ್ಪ ತಾಲ್ಲೂಕು ಯಡೆಪಳ್ಳಿ ಸ್ಥಳದ ಖಾನುಭೋಗ ಸುಬ್ಬಣ್ಣನು ಸದರೀ ಯಡೆಪಳ್ಳಿ ವಾಸಸ್ಥನಾಗಿ ಮೃತಪಟ್ಟ ನಾಗಲಾಪುರದ ಖಾನುಭೋಗ ಸುಬ್ಬಣ್ಣನ ಜೀಂದಗಿ ಬಾಬ್ತಾಗಿ ಬರತಕ್ಕ 900 ರೂಪಾಯಿಗಳ ನಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಪಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಖಾನೂಭೋಗ ಸುಬ್ಬಣ್ಣನ ಅರ್ಜೀಯನ್ನು 1885ನೇ ಇಸವಿ ಜೂನ್ ತಿಂಗಳು ತಾರೀಖು 29ರಲ್ಲಾ ಕೇಳಿ ಟ್ಯಾಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾಗಲಾಪುರದ ಖಾನುಭೋಗ ಸುಬ್ಬಣ್ಣನ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1885ನೇ ಇಸವಿ ಮೇ ತಿಂಗಳು 22ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನನ್ನ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಕಡೂರು ಡಿಸ್ಟ್ರಿಕ್ಟ್.

ತಾರೀಖು 26ನೇ ಮೇ 1885.

ಕೊಪ್ಪದ ತಾಲ್ಲೂಕು ಆ್ಟಿಂಗ್ ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾದ ವೆಂಕಟವರದಯ್ಯಂಗಾರ್‌ರಿಗೆ, 1872ನೇ ಇಸವಿಯ 10ನೇ ನಂಬರ್ ಆಕ್ಟ್‌ಯಾನೆ ಕ್ರಿಮಿನಲ್ ಪ್ರೊಸೀಜ್ಯರ್ ಕೋಡಿನ 23 (b) ಸೆಕ್ಷನ್ ಅನುಸರಿಸಿ ಒಡರಡಿ ಕಂಡ ಅಧಿಕಾರಗಳು ಕೊಡಲ್ಪಟ್ಟಿರುತ್ತೆ;—

1. ಲಾಷ್ ವಿಚಾರಣೆ ಬಗ್ಯೆ ಅಧಿಕಾರ (ಸೆ. 135.)
2. ದರ್ಯಾಫ್ತ್ ಮಾಡಲು ಅವರಿಗೆ ಅಧಿಕಾರ ಇರುವ ಮೊಕದ್ದಮೆಗಳಲ್ಲಿ ಫಿರ್ಯಾದ್‌ಗಳನ್ನು ದಾಖಲ್ಮಾಡಿಕೊಳ್ಳಲಿಕ್ಕೂ ಪೊಲೀಸ್ ರಿಪೋರ್ಟುಗಳನ್ನು ತೆದಮಾಡಿಕೊಳ್ಳಲಿಕ್ಕೂ ಅಧಿಕಾರ (ಸೆ. 141.)
3. ನಿರೋಧವನ್ನು ಆಡ್ಡಿಪಡಿಸಲು ಹುಕ್ಕುಂ ಕೊಡಲಿಕ್ಕೆ ಅಧಿಕಾರ (ಸೆ. 518.)
4. ಪೇಸಿಕೆಗಳು ಬಾರ್‌ಬಾರ್ ನಡಿಸಲ್ಪಡುವದನ್ನು ಆಡ್ಡೀಪಡಿಸಲು ಹುಕ್ಕುಂ ಕೊಡುವದಕ್ಕೆ ಅಧಿಕಾರ (ಸೆ. 519)

ಜಿ ಯಫ್. ಮೈಕಲ್‌ಜಾನ್,
ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್.

ಸನ್1885ನೇ ಇಸವಿ ಏಪ್ರೀಲ್ ತಿಂಗಳ ಕಾಲಸ್ಥಿತಿ ರಿಪೋರ್ಟು.

ಬೆಂಗಳೂರು ಡಿಸ್ಟ್ರಿಕ್ಟ್.

ಮಳೆ.—ಬೆಂಗಳೂರು ಹೆಡ್ ಕ್ವಾರ್ಟರಿನಲ್ಲಿ 25 ಸೆಂಟ್ಸ್ ಮಳೆ ಆಳೆಯಲ್ಪಟ್ಟಿರುತ್ತೆ. ಡಿಸ್ಟ್ರಿಕ್ಟ್ ಮಳೆ ಸಾಧಾರಣವಾಗಿ ಅಲ್ಪಸ್ವಲ್ಪ ಮಳೆ ಬಿದ್ದಿರುತ್ತೆ. ಸರಾಸರಿ 55 ಸೆಂಟ್ಸ್ ಮಳೆಗೆ ಯಲ್ಲೂ ಹೆಚ್ಚಲಿಲ್ಲವು.

ಫಸಲ್ ಸ್ಥಿತಿ.—ಫಸಲಿನಲ್ಲಿರುವ ವೈಕಾಖೀ ಭತ್ತಾ ಗನ್ನಾ ಈ ಫಸಲ್‌ಗಳು ತಕ್ಕಷ್ಟು ನೀರಿಲ್ಲದೆ ಬಾಡುತ್ತಿರುವಂತೆ ರಿಪೋರ್ಟುಗಿರುತ್ತೆ. ಕಬ್ಬಿನ ಆಲೆ ಕೆಲಸಗಳು ನಡಿಯುತ್ತಿಲಿವೆ. ಮತ್ತು ಕೆಲವು ಸ್ಥಳಗಳಲ್ಲಿ ಗನ್ನಾ ಪೇರಾವಾಗಿಧೆ.

ಜನಾರೋಗ್ಯ.—ಸಾಧಾರಣವಾಗಿ ಚನ್ನಾಗಿ ಯಿವೆ.

ಜನಮರಣ.—ಮಾರ್ಚೀ ಮಾಹೆಯಲ್ಲಿ 527. ಅದರ ಹಿಂದಿನ ತಿಂಗಳಲ್ಲಿ 482, 45 ಜಾಸ್ತಿ.